# ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ:ಎಸ್‌ವೈಎನ್/ಎಸ್1/ಪುನರ್ ರಚನೆ/1/2019-20

ಜ್ಞಾನಭಾರತಿ,
ಬೆಂಗಳೂರು-560056
ದಿನಾಂಕ: 16.12.2019

## ಅಧಿಸೂಚನೆ

ವಿಷಯ: ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000ದ ಪ್ರಕರಣ 28(1) (ಜಿ) ರನ್ವಯ ಬೆಂಗಳೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಪ್ರಾಧಿಕಾರಕ್ಕೆ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಿರುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಹೊರಡಿಸಲಾಗಿರುವ ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 438 ಯುಬಿವಿ 2018 (ಭಾಗ-5), ದಿನಾಂಕ: 10.12.2019
2.ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ 16.12.2019

**************

ಉಲ್ಲೇಖ (1) ರ ಸರ್ಕಾರದ ಅಧಿಸೂಚನೆಯಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000ದ, ಪ್ರಕರಣ 28 (1) (ಜಿ) ರನ್ವಯ ಅದೇ ಅಧಿನಿಯಮದ ಪ್ರಕರಣ 39 (1) ರ ಉಪಬಂಧಕ್ಕೊಳಪಟ್ಟು, ರಾಜ್ಯ ಸರ್ಕಾರ ಈ ಕೆಳಕಂಡ 6 ಜನರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಬೆಂಗಳೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಪ್ರಾಧಿಕಾರಕ್ಕೆ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಿರುತ್ತದೆ.

| ಕ್ರ.ಸಂ | ಹೆಸರು ಮತ್ತು ವಿಳಾಸ | ಪ್ರವರ್ಗ |
|---|---|---|
| 01 | ಪ್ರೊ. ಟಿ.ವಿ. ರಾಜು<br># 42, 14ನೇ ಅಡ್ಡರಸ್ತೆ, 10ನೇ ಮುಖ್ಯರಸ್ತೆ,<br>ಬಿ.ಟಿ.ಎಂ ಬಡಾವಣೆ, 2ನೇ ಹಂತ, ಎನ್.ಎಸ್. ಪಾಳ್ಯ,<br>ಬೆಂಗಳೂರು -560 076 | ಸಾಮಾನ್ಯ |
| 02 | ವಿದೇಯ ಬೆಳಗೋಡೆ ಶ್ರೀಕಂಠ<br>ನಂ. 557, 1ನೇ ಮಹಡಿ, 1ನೇ ಮೇನ್, 3ನೇ ಬ್ಲಾಕ್,<br>ಆರ್.ಎಂ.ವಿ 2ನೇ ಹಂತ, ಬೆಂಗಳೂರು 560 094. | ಸಾಮಾನ್ಯ |
| 03 | ಡಾ. ಎಂ.ವಿ. ಆಶಾ<br>ನಂ. 126, ಟೆಲಿಕಾಂ ಬಡಾವಣೆ, 1ನೇ ಹಂತ,<br>ಮೈಸೂರು-570 009. | ಮಹಿಳೆ |
| 04 | ಶ್ರೀ ಗೋಪಿನಾಥ<br>ನ. 64, 9ನೇ ಮುಖ್ಯರಸ್ತೆ, ಆರಾಧನಾ ನೇತ್ರಮಂದಿರ<br>ಎದುರುಗಡೆ, ಮತ್ತಿಕೆರೆ, ಬೆಂಗಳೂರು-560 054. | ಹಿಂದುಳಿದ ವರ್ಗ |
| 05 | ಡಾ. ಗೋವಿಂದರಾಜು<br>ನಂ. 56, 8ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ,<br>ಜ್ಞಾನಜ್ಯೋತಿನಗರ, ಸಂಯುಕ್ತ ಕರ್ನಾಟಕ ಬಡಾವಣೆ,<br>ಬೆಂಗಳೂರು-560 056. | ಪರಿಶಿಷ್ಟ ಜಾತಿ |
| 06 | ಶ್ರೀ ಪ್ರೇಮ ಸೋಹನ್‌ಲಾಲ್<br>ನಂ 006, ವಿ2 ರಿಷಿರತ್ನ ಅಪಾರ್ಟ್‌ಮೆಂಟ್ಸ್<br>ವಿಠ್ಠಲನಗರ, ಜೆಂಕಿ ಪಾರ್ಕ್ ರಸ್ತೆ,<br>ಚಾಮರಾಜಪೇಟೆ, ಬೆಂಗಳೂರು – 560 026. | ಅಲ್ಪ ಸಂಖ್ಯಾತರು |

...2

ಮುಂದುವರೆದು, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಅನ್ವಯಿಕ ವಿಶ್ವವಿದ್ಯಾಲಯದ ಸಿಂಡಿಕೇಟ್ ಪ್ರಾಧಿಕಾರಕ್ಕೆ ಮಾಡಲಾಗಿರುವ ಪೂರ್ವ ಪ್ರಸ್ತಾಪಿತ ನಾಮನಿರ್ದೇಶನಗಳು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತವೆಂದು ಉಲ್ಲೇಖಿತ (1) ರ ಸರ್ಕಾರದ ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

1. ನಾಮನಿರ್ದೇಶಿತ ಸದಸ್ಯರು ಸಾಮಾಜಿಕ ಮೀಸಲಾತಿಯ ಬಗ್ಗೆ ಒಂದು ತಿಂಗಳ ಒಳಗಾಗಿ ಸಕ್ಷಮ ಪ್ರಾಧಿಕಾರದಿಂದ ದೃಢೀಕರಿಸಿ /ಪ್ರಾಮಾಣೀಕರಿಸಿ ಪೂರಕ ದಾಖಲೆಗಳನ್ನು ನಾಮನಿರ್ದೇಶನಗೊಂಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸತಕ್ಕದ್ದು.
2. ನಾಮನಿರ್ದೇಶಿತ ಸದಸ್ಯರು ಪಡೆದಿರುವ ಸ್ನಾತಕ/ಸ್ನಾತಕೋತ್ತರ ಪದವಿಗಳ ನೈಜತೆ/ಋಜುತ್ವದ ಬಗ್ಗೆ ಪದವಿ ಪಡೆದ ವಿಶ್ವವಿದ್ಯಾಲಯಗಳಿಂದ ದೃಢೀಕರಿಸಿದ ಕುರಿತು ಪ್ರಮಾಣಪತ್ರಗಳನ್ನು ಒಂದು ತಿಂಗಳ ಒಳಗಾಗಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸತಕ್ಕದ್ದು.
3. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ದ, ಪ್ರಕರಣ 28(1) (ಜಿ)ರ ಪತರಂತುಕದಲ್ಲಿ ಗೊತ್ತುಪಡಿಸಿರುವಂತೆ, ನಾಮನಿರ್ದೇಶಿತ ಸದಸ್ಯರು, ನಾಮನಿರ್ದೇಶನಗೊಂಡ ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜಿನಲ್ಲಿ ಅಥವಾ ವಿಶ್ವವಿದ್ಯಾಲಯದ ಯಾವುದೇ ಸ್ಥಾನಮಾನದಲ್ಲಿ ನಿಯೋಜನೆ ಹೊಂದಿರದ ಬಗ್ಗೆ ವಿಶ್ವವಿದ್ಯಾಲಯವು ದೃಢೀಕರಿಸಿಕೊಳ್ಳತಕ್ಕದ್ದು.
4. ನಾಮನಿರ್ದೇಶಿತ ವ್ಯಕ್ತಿಗಳು ಸಿಂಡಿಕೇಟ್ ಸದಸ್ಯರಾಗಿ ಮುಂದುವರೆಯುವುದು ಅವರ ಪದಾವಧಿಯಲ್ಲಿ ಸದ್ವರ್ತನೆ ತೋರುವ, ಸರ್ಕಾರದ ಕಾರ್ಯ ನೀತಿಗೆ ಬದ್ಧರಾಗಿರುವ ಹಾಗೂ ವಿಶ್ವವಿದ್ಯಾಲಯದ ಶೈಕ್ಷಣಿಕ ಮತ್ತು ಸಾಂಸ್ಥಿಕ ಸ್ವಾಯತ್ತತೆ / ಸ್ವಾವಲಂಭಿತನವನ್ನು ಸುಸ್ಥಿರವಾಗಿ ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುವ ಷರತ್ತಿಗೊಳಪಟ್ಟಿರುತ್ತದೆ.
5. ಈ ಷರತ್ತುಗಳ ಪಾಲನೆಯಲ್ಲಿನ ವಿಫಲತೆಯು ಸಿಂಡಿಕೇಟ್ ನಾಮನಿರ್ದೇಶನವನ್ನು ಮನರಾವಲೋಕಿಸುವ ಅಥವಾ ಹಿಂಪಡೆಯುವ ಪರಿಣಾಮ ಹೊಂದಿರುತ್ತದೆ.

ಆದಕಾರಣ, ಪೂರ್ವ ಪ್ರಸ್ತಾಪಿತ ನಾಮನಿರ್ದೇಶನಗಳು ಮೇಲ್ಕಂಡ ಷರತ್ತು ಮತ್ತು ನಿಬಂಧನೆಗೊಳಪಟ್ಟಿರುತ್ತದೆಂದು ಹಾಗೂ ನಾಮನಿರ್ದೇಶನದ ಸದಸ್ಯರುಗಳು ಒಂದು ತಿಂಗಳೊಳಗಾಗಿ ಅವರು ಪಡೆದಿರುವ ಸ್ನಾತಕ / ಸ್ನಾತಕೋತ್ತರ ಪದವಿಗಳ ನೈಜತೆ ಬಗ್ಗೆ ಪದವಿ ಪಡೆದ ವಿಶ್ವವಿದ್ಯಾಲಯಗಳಿಂದ ದೃಢೀಕರಿಸಿದ ಪ್ರಮಾಣಪತ್ರವನ್ನು ಮತ್ತು ಸಂಬಂಧಪಟ್ಟ ಸದಸ್ಯರು ಸಾಮಾಜಿಕ ಮೀಸಲಾತಿಯ ಬಗ್ಗೆ ಒಂದು ತಿಂಗಳೊಳಗಾಗಿ ಸಕ್ಷಮ ಪ್ರಾಧಿಕಾರದಿಂದ ದೃಢೀಕರಿಸಿದ ಪೂರಕ ದಾಖಲೆಗಳನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸತಕ್ಕದ್ದು. ಮೇಲ್ಕಂಡ ನಾಮನಿರ್ದೇಶಿತ ಸದಸ್ಯರು ಬೆಂಗಳೂರು ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳಲ್ಲಿ ಅಥವಾ ಬೆಂಗಳೂರು ವಿಶ್ವವಿದ್ಯಾಲಯದ ಯಾವುದೇ ಸ್ಥಾನಮಾನದಲ್ಲಿ ನಿಯೋಜನೆ ಹೊಂದಿರದ ಬಗ್ಗೆ ದೃಢೀಕರಣ ಪತ್ರವನ್ನು ಈ ಕಛೇರಿಗೆ ಸಲ್ಲಿಸತಕ್ಕದ್ದು.

ಆದೇಶದ ಮೇರೆಗೆ,

ಕುಲಸಚಿವರು
16/12/2019

ಗೆ,

ಸಂಬಂಧಪಟ್ಟ ಸದಸ್ಯರಿಗೆ,

**ಪ್ರತಿಗಳು:**

1. ಸಿಂಡಿಕೇಟ್ ಸದಸ್ಯರುಗಳಿಗೆ.
2. ರಾಜ್ಯಪಾಲರ ಆಪ್ತಕಾರ್ಯದರ್ಶಿ, ರಾಜಭವನ, ಬೆಂಗಳೂರು-560 001.
3. ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಕರ್ನಾಟಕ ಸರ್ಕಾರ, ಬೆಂಗಳೂರು-560 001.
4. ಕುಲಪತಿಗಳ:ಕುಲಸಚಿವರ:ಕುಲಸಚಿವ(ಮೌಲ್ಯಮಾಪನ):ವಿತ್ತಾಧಿಕಾರಿಗಳ ಆಪ್ತಕಾರ್ಯದರ್ಶಿ0ಯವರಿಗೆ.
5. ಕರ್ನಾಟಕ ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳ ಕುಲಸಚಿವರಿಗೆ.
6. ಬೆಂಗಳೂರು ವಿಶ್ವವಿದ್ಯಾಲಯ ಗೆಜೆಟ್.
7. ಸಿಸ್ಟಮ್ ಅನಾಲಿಸ್ಟ್, ಇ-ಆಡಳಿತ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.